ನಿರ್ದೇಶಕರ ಕಛೇರಿ
ಅಲ್ಪಸಂಖ್ಯಾತರ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080-22535901
Email:directorgokdom@gmail.com
Web: https://dom.karnataka.gov.in
ಮೌಲನಾ ಅಜಾದ್ ಭವನ, ನಂ.16 ಸಿ, ಮಿಲ್ಲರ್‌ಟ್ಯಾಂಕ್ ಬೆಡ್‌ರಸ್ತೆ, ವಸಂತನಗರ, ಬೆಂಗಳೂರು-560052.

**ಸಂಖ್ಯೆ:ಆಸಂನಿ/ಮದರಸಾ/ಸಿಆರ್-01/2023-24** **ದಿ:15.03.2024**

## ಕಾರ್ಯಾದೇಶ

**ವಿಷಯ:** ರಾಜ್ಯದಲ್ಲಿ ನೊಂದಾಯಿತ ಮದರಸಾಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು Online-Offline Coaching ನೀಡಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸುವ ಕುರಿತು

**ಉಲ್ಲೇಖ**
1. ಸರ್ಕಾರದ ಆದೇಶ ಸಂಖ್ಯೆ: MWD 554 MDS 2023 ದಿ:20.12.2023.
2. ಸರ್ಕಾರದ ಪತ್ರ ಸಂಖ್ಯೆ: MWD 554 MDS 2023 ದಿ:29.12.2023
3. ಸರ್ಕಾರದ ಆದೇಶ ಸಂಖ್ಯೆ: MWD 554 MDS 2023 ದಿ:13.03.2024.
4. ಸರ್ಕಾರದ ಆದೇಶ ಸಂಖ್ಯೆ: MWD 554 MDS 2023 ದಿ:15.03.2024.

<>>>()<<<>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ಆದೇಶದಲ್ಲಿ ರಾಜ್ಯದಲ್ಲಿ ವಕ್ಫ್ ನೊಂದಾಯಿತ / ಸಂಘ ಸಂಸ್ಥೆ ಕಾಯ್ದೆಯಡಿ ನೊಂದಾಯಿತ ಮದರಸಾಗಳಲ್ಲಿ ವ್ಯಾಸಂಗ ಮಾಡುತ್ತಿರುವ 13 ರಿಂದ 18 ವರ್ಷದ ಒಳಗಿನ ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ 2 ವರ್ಷಗಳ ಕಾಲ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು Online-Offline Coaching ನೀಡಲು ಹಾಗೂ ಎಸ್.ಎಸ್.ಎಲ್.ಸಿ / ಪಿ.ಯು.ಸಿ/ ಪದವಿಯನ್ನು ರಾಜ್ಯ/ರಾಷ್ಟ್ರೀಯ ಮುಕ್ತ ಶಾಲೆಗಳ ಮೂಲಕ/ NIOS /ದೂರ ಶಿಕ್ಷಣದ ಮೂಲಕ ನೀಡುವುದಕ್ಕಾಗಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

ಮುಂದುವರೆದು, ಉಲ್ಲೇಖ(2)ರ ಪತ್ರದಲ್ಲಿ ಸದರಿ ಕಾರ್ಯಕ್ರಮದಡಿ ಟೆಂಡರ್ ಆಹ್ವಾನಿಸಲು ಅನುಮತಿಯನ್ನು ನೀಡಿರುತ್ತಾರೆ. ಅದರಂತೆ ದಿನಾಂಕ:30.12.2023 ರಂದು ಇ-ಪ್ರೊಕ್ಯೂರ್ ಮೆಂಟ್ ಮೂಲಕ ಟೆಂಡರ್ ಅನ್ನು ಆಹ್ವಾನಿಸಿ, ಕೊನೆಯ ದಿನಾಂಕಕ್ಕೆ ಕೊನೆಯ ದಿನಾಂಕಕ್ಕೆ ಕೇವಲ ಒಂದು ಸಂಸ್ಥೆಯಿಂದ ಟೆಂಡರ್ ಸ್ವೀಕರಿಸಲಾಗಿದ್ದರಿಂದ ಪುನಃ ದಿ:07.02.2024 ರಂದು ಮರು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಅದರಲ್ಲಿ ಸದರಿ ಪ್ರಕಟಣೆಯನ್ವಯ ಕೊನೆಯ ದಿನಾಂಕಕ್ಕೆ ಎರಡು ಬಿಡ್ಡರ್ ಗಳಿಂದ ಟೆಂಡರ್ ಅನ್ನು ಸ್ವೀಕರಿಸಲಾಗಿದ್ದು, ಕೇವಲ ಒಂದು ಸಂಸ್ಥೆ ಮಾತ್ರ ಅರ್ಹತೆ ಹೊಂದಿರುತ್ತದೆ. ಅದರಂತೆ, ಉಲ್ಲೇಖ(3)ರ ಆದೇಶದಲ್ಲಿ ಆರ್ಥಿಕ ಬಿಡ್ ಅನ್ನು ತೆರೆಯಲು ಅನುಮತಿ ನೀಡಿ ಆದೇಶಿಸಲಾಗಿದೆ.

ಅದರಂತೆ, ದಿ: 13.03.2024ರಂದು Financial Bid ಅನ್ನು ತೆರೆಯಲಾಯಿತು. ಸದರಿ ಸಂಸ್ಥೆಯವರು ನೀಡಿರುವ ದರಕ್ಕೆ Rate Negotiation ಕೋಟ್ ಮಾಡಲು ತಿಳಿಸಲಾಗಿದ್ದು, ಅದರಂತೆ ಸಂಸ್ಥೆಯವರು ಈ ಕೆಳಕಂಡಂತೆ ದರವನ್ನು ನೀಡಿದ್ದು, ಉಲ್ಲೇಖ(4)ರ ಸರ್ಕಾರದ ಆದೇಶದಲ್ಲಿ ಸದರಿದರ ಸಂಧಾನ ಒಪ್ಪಿ ಟೆಂಡರ್ ಅನ್ನು ಅಂಗೀಕರಿಸಿ ಆದೇಶಿಸಿರುತ್ತಾರೆ. ವಿವರ ಈ ಕೆಳಕಂಡಂತಿದೆ.

| SL | Name of the Institute | Price quoted by the bidder | Negotiation Rate |
|---|---|---|---|
| 01 | ABDUL HASEEB (ALLAMA IQBAL EDUCATIONAL SOCIETY) | Rs. 47,200/- | Rs. 19,800 /- |

ಪ್ರಯುಕ್ತ, 100 ಮದರಸಾಗಳಲ್ಲಿ ವ್ಯಾಸಂಗ ಮಾಡುತ್ತಿರುವ 13 ರಿಂದ 18 ವರ್ಷದ ಒಳಗಿನ ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಜೊತೆ, 2 ವರ್ಷಗಳ ಕಾಲ ಔಪಚಾರಿಕ ಮತ್ತು ಗಣಕೀಕೃತ ಶಿಕ್ಷಣವನ್ನು (Online-Offline Coaching) ನೀಡಿ ಎಸ್.ಎಸ್.ಎಲ್.ಸಿ/ ಪಿ.ಯು.ಸಿ/ ಪದವಿಯನ್ನು ರಾಜ್ಯ/ರಾಷ್ಟ್ರೀಯ ಮುಕ್ತ ಶಾಲೆಗಳ ಮೂಲಕ/ NIOS/ ದೂರ ಶಿಕ್ಷಣದ ಮೂಲಕ ನೀಡುವುದಕ್ಕಾಗಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಈ ಕೆಳಕಂಡ Specification ಹಾಗೂ ತಾಂತ್ರಿಕ ವಿಶಿಷ್ಟತೆಯನ್ವಯ ಅನುಬಂಧ-01ರಲ್ಲಿ ನಮೂದಿಸಿರುವ ಮದರಸಾಗಳಿಗೆ ಮೂಲಭೂತ ಸೌಕರ್ಯಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದನ್ವಯ ಸರಬರಾಜು ಮಾಡಲು ALLAMA IQBAL EDUCATIONAL SOCIETY ರವರಿಗೆ ಕೆಳಕಂಡ ಷರತ್ತಿಗೊಳಪಟ್ಟು ಕಾರ್ಯದೇಶವನ್ನು ನೀಡಲಾಗಿದೆ .

**ಅನುದಾನದ ವಿವರ**

| ಕ್ರ. ಸಂ | ಪ್ರತಿ ವಿದ್ಯಾರ್ಥಿಗೆ ಸರ್ಕಾರ ನಿಗಧಿಪಡಿಸಿರುವ ದರ (ರೂ. ಗಳಲ್ಲಿ) | ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 01 | 19,800 | 5000 | 990.00 |

**ಮೂಲಭೂತ ಸೌಕರ್ಯ ಹಾಗೂ Specification ವಿವರ**

| SN | Items | Description | NOS |
|---|---|---|---|
| 1 | NIOS Registration, Books | | 5000 |
| 2 | NIOS Exam Fees | | 5000 |
| 3 | 100 Mentors & 10 Regional head/backup teachers.<br>1 mentor assigned for each madrasa1 Regional Backup over every 10 Madrasas | Year1 - 9 Months Year2 - 10 months | 110 |
| 4 | LMS Access with Online, Recorded Classes and live recording of class. Assignments, Doubt Clarifications etc | For 19 Months | 5000 |
| 5 | Smart Board 65 *inch Interactive Flat Panel* | 1 Panel for EachMadrasa | 100 |
| 6 | Computers for Practice Or Laptop<br>I5 Processor, 8GB Ram, 500 GB HDD, 17 inch Monitor, Webcam, Keyword, Mouse | 1 PC for 10 students, total 500 Computers orLaptops | 500 |
| 7 | AICU Books | | 5000 |
| 8 | ERP Software | | 5000 |
| 9 | Printers | | 100 |
| 10 | CCTV | | 4*100 |
| 11 | Teachers | | 100 |
| 12 | Project Head | | 1 |
| 13 | Project Coordinator | | 10 |
| 14 | Staff Payroll | | |
| 15 | Teacher recruitment, Publicity & Training. | | 1 |
| 16 | Internet Charges | | 100 |

**Two year Course Plan**

**(For Age group 13 to 18 years)**

| SN | Course | Course Duration | Course Description | Daily Class | Mode of class |
|---|---|---|---|---|---|
| 1 | AICU | 6 Months | Foundation Course ( English, Maths, Kannada) | 90 Minutes | Online/ offline mode |
| 2 | Preparatory Level | 3 Months | Foundation Course ( English, Maths, Kannada, Science) | 90 Minutes | Online/ offline mode |
| 3 | 10th class (NIOS) | 15 Months | Kannada, English, Maths, Science andData entry Operation | 150 Minutes | Online/ offline mode |

**Deliverables**

| | | |
|---|---|---|
| 1 | Live Online Beginner Course | 90 Hours |
| 2 | Live Online 10th NIOS Class | 480 Hours |
| 3 | Computer Class | 60 hours |
| 4 | Beginner Books | 3 Text Books and 2 Workbooks |
| 5 | Intermediate | 3 Text Books and 3 Workbooks |
| 6 | 10th Grade NIOS Books | 5 book for each student |
| 7 | Mobile App for Hybrid Learning | 1 |

ಷರತ್ತುಗಳು:

## ಶೈಕ್ಷಣಿಕ ಷರತ್ತುಗಳು

1) ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಅಂತಿಮಗೊಳಿಸಿರುವ ಮದರಸಾಗಳಿಗೆ ಮಾತ್ರ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.
2) 5000 ಮದರಸಾ ವಿದ್ಯಾರ್ಥಿಗಳಿಗೆ ಮೇಲೆ ವಿವರಿಸಿರುವಂತೆ 10ನೇ ತರಗತಿಯ ಪಠ್ಯಕ್ರಮಕ್ಕೆ ಅನುಗುಣವಾಗಿ Online –Offline Coaching ನೀಡುವುದು.
3) ಟೆಂಡರ್ ದಸ್ತಾವೇಜುನಲ್ಲಿ ತಿಳಿಸಿರುವಂತೆ, ಸದರಿ ಮದರಸಾಗಳ Mentors teachers & Project Coordinator ಗಳ ಹೆಸರು, ದೂರವಾಣಿ ಸಂಖ್ಯೆಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.
4) ಸದರಿ ಮದರಸಾಗಳ Faculty Details ಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
5) ಮದರಸಾಗಳ ವಿದ್ಯಾರ್ಥಿಗಳಿಗೆ ನೀಡುವ Study Material ಗಳ ಒಂದು ಪ್ರತಿಯನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ ಸಲ್ಲಿಸುವುದು.
6) ವಿದ್ಯಾರ್ಥಿಗಳಿಗೆ ಪುಸ್ತಕಗಳ ಸರಬರಾಜು ಮಾಡಿರುವ ಬಗ್ಗೆ ವಿದ್ಯಾರ್ಥಿಗಳಿಂದ ದೃಢೀಕೃತ ಪ್ರತಿಯನ್ನು ಸಲ್ಲಿಸುವುದು.
7) ತರಬೇತಿ ಪಡೆಯುವ ವಿದ್ಯಾರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಶೇ. 80 ರಷ್ಟು ಹಾಜರಾತಿಯು ಕಡ್ಡಾಯವಾಗಿರುತ್ತದೆ.
8) 2 ವರ್ಷಗಳ Online –Offline Coaching ನೀಡಿ 2025-26ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸದರಿ ವಿದ್ಯಾರ್ಥಿಗಳನ್ನು 10 ನೇ ತರಗತಿಯ ಪರೀಕ್ಷೆಗೆ ಹಾಜರು ಪಡಿಸಲು ಕ್ರಮಕೈಗೊಳ್ಳುವುದು.
9) ಸದರಿ ಮದರಸಾಗಳ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸಿ ಅವರನ್ನು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕೂರಿಸುವ ಜವಾಬ್ದಾರಿಯು ಸಂಸ್ಥೆಯದ್ದೇ ಆಗಿರುತ್ತದೆ. ಹಾಗೂ ಶೇ, 100% ರಷ್ಟು ಫಲಿತಾಂಶಗಳಿಸತಕ್ಕದ್ದು
10) ಸದರಿ ವಿದ್ಯಾರ್ಥಿಗಳಿಗೆ Offline Coaching ನೀಡುವ link ಅನ್ನು ನಿರ್ದೇಶನಾಲಯಕ್ಕೆ ನೀಡುವುದು.
11) Online –Offline Coaching ನೀಡುವ ವಿದ್ಯಾರ್ಥಿಗಳು ಮದರಸಾ ವಿದ್ಯಾರ್ಥಿಗಳಾಗಿದ್ದು, ಕರ್ನಾಟಕ ರಾಜ್ಯದವರಾಗಿರಬೇಕು.
12) Online –Offline Coaching ಪಡೆಯುವ ಮದರಸಾ ವಿದ್ಯಾರ್ಥಿಗಳ ಪಟ್ಟಿಗೆ ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಂದ ಅನುಮೋದನೆ ಪಡೆಯತಕ್ಕದ್ದು.
13) ಪ್ರತಿ ಮಾಹೆಯು ವಿದ್ಯಾರ್ಥಿಗಳ Performance Report/ Test Report / ಶೈಕ್ಷಣಿಕ ಪ್ರಗತಿ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವುದು.

## ಸರಬರಾಜು ಷರತ್ತು

14) ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಸೂಚಿಸಿರುವ ಮದರಸಾಗಳಿಗೆ ಮೇಲೆ ವಿವರಿಸಿರುವಂತೆ Specification ರೀತ್ಯಾ ಸಾಮಾಗ್ರಿಗಳನ್ನು ಸರಬರಾಜು ಮಾಡಿ ಅಳವಡಿಸತಕ್ಕದ್ದು.
15) ಸದರಿ ಮದರಸಾಗಳಿಗೆ ಸಾಮಗ್ರಿಗಳನ್ನು ಉಚಿತವಾಗಿ ಸಾಗಾಣಿಕೆ ಮಾಡಿ, ಇನ್‌ಸ್ಟಾಲೇಶನ್ ಮತ್ತು ಕಮಿಷನಿಂಗ್ ಮಾಡಿ, ಮದರಸಾಗಳ ಅಧ್ಯಕ್ಷರು/ಮೇಲ್ವಿಚಾರಕರು/ ಮೌಲ್ವಿಗಳಿಂದ ಸ್ವೀಕೃತಿಯನ್ನು ಪಡೆದು ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.
16) ಸದರಿ ಆದೇಶದಲ್ಲಿರುವಂತೆ ಸರಬರಾಜು ಮಾಡಲಾಗುವ ಸಾಮಾಗ್ರಿಗಳ ಮೇಲೆ ಕಡ್ಡಾಯವಾಗಿ "Sponsored by Minority Welfare Department" ಎಂದು ಸ್ಕ್ರೀನ್ ಪ್ರಿಂಟ್ ಮಾಡಿ ಸರಬರಾಜು ಮಾಡತಕ್ಕದ್ದು.
17) ಈ ಆದೇಶ ತಲುಪಿದ 60 ದಿನಗಳ ಒಳಗೆ ಸೂಚಿಸಲಾದ ಮದರಸಾಗಳಿಗೆ ಸಾಮಾಗ್ರಿಗಳನ್ನು ಡೋರ್ ಡೆಲಿವರಿ ಮಾಡತಕ್ಕದ್ದು.
18) ಮೂಲಭೂತ ಸೌಕರ್ಯಗಳನ್ನು ಅಳವಡಿಸಿದ ನಂತರ GPS Photos ಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.
19) ನಿಗದಿತ Specification ರೀತ್ಯಾ ಗುಣಮಟ್ಟ ಇಲ್ಲದಿದ್ದಲ್ಲಿ ಅಂತಹ ಸಾಮಾಗ್ರಿಗಳನ್ನು ತಿರಸ್ಕರಿಸಲಾಗುವುದು.
20) ಸರಬರಾಜು ಮಾಡುವ ಸಮಯದಲ್ಲಿ ಸಾಮಾಗ್ರಿ ಹಾಳಾದಲ್ಲಿ ಸಂಸ್ಥೆಯವರು ತಮ್ಮ ಸ್ವಂತ ಖರ್ಚಿನಲ್ಲಿ ಬದಲಾಯಿಸಿ ಸರಬರಾಜು ಮಾಡತಕ್ಕದ್ದು.
21) ಸಾಮಗ್ರಿಗಳ ವಾರಂಟಿ ಅವಧಿ 02 ವರ್ಷಗಳಾಗಿದ್ದು, ಈ ಅವಧಿಯಲ್ಲಿ ದುರಸ್ಥಿಗೆ ಬಂದಲ್ಲಿ ಸಂಬಂಧಪಟ್ಟ ಮದರಸಾಗಳಿಂದ ದೂರವಾಣಿ ಕರೆ ಬಂದ 24 ಗಂಟೆಯೊಳಗೆ ದುರಸ್ಥಿ ಮಾಡತಕ್ಕದ್ದು.

## ಅನುದಾನದ ವಿವರ

22) ಅನುದಾನ ಬಿಡುಗಡೆ:- ಟೆಂಡರ್ ದಸ್ತಾವೇಜುಗಳಲ್ಲಿ ನಿಗಧಿಪಡಿಸಿರುವ ನಿಯಮಗಳನ್ವಯ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

23) ಸರ್ಕಾರದ ಅನುಮೋದಿತ ದರದಂತೆ ಮೂಲಭೂತ ಸೌಕರ್ಯಗಳ ಹಾಗೂ Online coaching ದರಗಳು ಎಲ್ಲಾ ರೀತಿಯ ತೆರಿಗೆ, ಸಾಗಾಣಿಕೆ ವೆಚ್ಚ ಹಾಗೂ ಇತರೆ ಎಲ್ಲಾ ವೆಚ್ಚಗಳನ್ನು ಒಳಗೊಂಡಿರುತ್ತದೆ. ಈ ದರವನ್ನು ಹೊರತುಪಡಿಸಿ ಇನ್ನೂ ಯಾವುದೇ ಹೆಚ್ಚುವರಿ ವೆಚ್ಚಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ.

24) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿ / ತಾಲ್ಲೂಕು ವಿಸ್ತೀರ್ಣಧಿಕಾರಿ , ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಸದರಿ ಮದರಸಾಗಳಿಗೆ ಭೇಟಿ ನೀಡಿ ವಿವರವಾದ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸಿದ ನಂತರ ಹಣ ಪಾವತಿಗಾಗಿ ಬಿಲ್‌ಅನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು ರವರಿಗೆ ಸಲ್ಲಿಸುವುದು.

25) ಬಿಡುಗಡೆಯಾದ ಅನುದಾನಕ್ಕೆ ಉಪಯೋಗಿತ ಪ್ರಮಾಣ ಪತ್ರವನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು.

**ಇತರೆ ಷರತ್ತುಗಳು**

26) ಸದರಿ ಕಾರ್ಯಾದೇಶವನ್ನು ಕರ್ನಾಟಕ ಪಾರದರ್ಶಕತೆಯ ಅಧಿನಿಯಮ 1999ರನ್ವಯ ಅನುಷ್ಠಾನಗೊಳಿಸತಕ್ಕದ್ದು.

27) ಸಂಬಂಧಪಟ್ಟ ಸಂಸ್ಥೆಯು ಈ ಕಾರ್ಯಾದೇಶ ಪಡೆದ 07 ದಿನಗಳೊಳಗಾಗಿ ಸದರಿ ಕಾರ್ಯಾದೇಶವನ್ನು ಕಾರ್ಯಗತಗೊಳಿಸಲು ಮತ್ತು ನಂತರದ ಸೇವೆ/ನಿರ್ವಹಣೆ ಸಂಬಂಧಿಸಿದಂತೆ ನಿರ್ದೇಶನಾಲಯದೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

28) ಸದರಿ ಆದೇಶವನ್ನು ಪಡೆದ ಕೂಡಲೇ ಕಾರ್ಯಾದೇಶದ ಮೊತ್ತಕ್ಕೆ 5%ರಷ್ಟು ಹಣವನ್ನು ಡಿ.ಡಿ ರೂಪದಲ್ಲಿ Performance Security Deposit ನಿರ್ದೇಶನಾಲಯಕ್ಕೆ ಸಲ್ಲಿಸುವುದು.

29) ಸದರಿ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

30) ಟೆಂಡರ್ ಸಂಬಂಧಿಸಿದಂತೆ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಈ ಆದೇಶದ ಷರತ್ತುಗಳನ್ನು ಪೂರ್ಣಗೊಳಿಸಲು ವಿಫಲರಾದಲ್ಲಿ ನಿಯಮಾನುಸಾರ ಆರ್ಥಿಕವಾಗಿ ದಂಡ ವಿಧಿಸಲಾಗುವುದು.

31) ಮೇಲ್ಕಂಡ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದರೆ ಸದರಿ ಆದೇಶವನ್ನು ರದ್ದುಪಡಿಸುವ ಅಧಿಕಾರ ಈ ಕೆಳಗೆ ಸಹಿ ಮಾಡಿದ ಅಧಿಕಾರಿ ಹೊಂದಿರುತ್ತಾರೆ.

32) ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಅಧಿಕಾರಿ / ತಾಲ್ಲೂಕು ವಿಸ್ತೀರ್ಣಧಿಕಾರಿ , ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಸದರಿ ಮದರಸಾಗಳಿಗೆ ತಿಂಗಳಿಗೊಮ್ಮೆ ಭೇಟಿ ನೀಡಿ ವಿವರವಾದ ವರದಿಯನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವುದು.

15/3/24

**ನಿರ್ದೇಶಕರು,**
**ಅಲ್ಪಸಂಖ್ಯಾತರ ನಿರ್ದೇಶನಾಲಯ**
**ಬೆಂಗಳೂರು.**

**ಇವರಿಗೆ,**

Sri. ABDUL HASEEB
ALLAMA IQBAL EDUCATIONAL SOCIETY